ಮಲಗಿದಂತಿದ್ದ ಮುತ್ತಿನಿಂದ ಬಿಗಿದ ಸರ್ಪದ ಬಾಯಿ. ಹಣೆಯ ಮೇಲೆ ಎಳೆಸೂರ್ಯನಂತಿರುವ ಕುಂಕುಮದ ಚಂದಕ್ಕೆ ಬಾಯಿ ಹಾಕಿದಂತೆ ಇಳಿಬಿದ್ದಿತ್ತು. ಬಸಮ್ಮ ಇಷ್ಟೆಲ್ಲಾ ತಯ್ಯಾರಾಗಿ ತವರು ಮನೆ, ಗಂಡನ ಮನೆ ಒಂದೇ ಊರು ಆಗಿದ್ದರಿಂದ ಗೌರಮ್ಮಗ ಆರತಿ ಬೆಳಗಲು ಒಬ್ಬಳೇ ಹೋಗದೆ ಓಣ್ಯಾಗಿನ ವಾರಿಗೇರನ್ನೆಲ್ಲಾ ಕೂಗಿ ಕರೆದು, ಬೆಳ್ಳಿ ತಟ್ಟೆಯಲ್ಲಿ ಆನೆ, ಒಂಟೆ, ಕುದುರೆ, ಬಾತುಕೋಳಿ, ತೇರು, ಗಿಣಿಯ ಸಕ್ಕರೆಯ ಅಚ್ಚುಗಳನ್ನು ಇಟ್ಟುಕೊಂಡು, ದೀಪ ಹಚ್ಚಿಟ್ಟುಕೊಂಡು ಓಣಿಯಲ್ಲಿ ನಡೆದು ಹೋಗುತ್ತಿದ್ದರೆ ಊರಾಗ ಇರೋ ಪ್ರಾಯದ ಹುಡುಗರೆಲ್ಲಾ "ಅಬಬ ಬಂದಳಪೋ ಸಕ್ರಿಗೊಂಬೆ, ನೋಡಕ ಎಲ್ಡು ಕಣ್ಣು ಸಾಲದಪ್ಪ. ಅವರಮ್ಮ ಎಂಗ ಹಡದಿದ್ದಾಳ ಅಬಬಬಬ" ಅಂತಿದ್ದರಷ್ಟೆ ಅಲ್ಲ, ಹೆಂಗಸರೂ ಬಸಮ್ಮನ ಸೌಂದರ್ಯಕ್ಕೆ ಈರ್ಷೆ ಪಟ್ಟು "ಎಲ್ಲಾರು ಅವರವರಿಗೆ ತಕ್ಕಂಗ ಇರತಾರೋಳು. ಈಕೇನಿ ಪೆಸಲ್ ಐದಾಳೇನು. ಬ್ರೆಮ್ಮ ಯಂಗ ಮಾಡಿದರು, ಏಟನ್ನ ಚೆಲುವು ಇಟ್ರು, ಅದಂತೂ ಎಲ್ಲಾರಿಗೆ ಒಂದೆಲ್ಲಮ್ಮಾ, ಅದಕ್ಕೆ ಏನನ್ನ ಚೆಲುವು ಕೊಟ್ಟಾನ ದೇವ್ರು. ಬಡರ್ದು ಒಂದೇ, ಆ ಸೌಕರ್ದು ಒಂದೇ. ಕಿವಿಗೆ ಬಂಗಾರ ಅಕ್ಕೇಬೋದು ಅದಕ್ಕ ಅಕ್ಕೆಂತರೇನು ಹ..ಹ...ಹ...." ಎಂದು ಬೋರಾಡಿ ತಮ್ಮನ್ನು ತಾವು ಸಮರ್ಥಿಸಿಕೊಳ್ಳುತ್ತಿದ್ದರು.

ಇಂತಹ ಚೆಲುವಿ ಬಸಮ್ಮನನ್ನು ಬಗಲಾಗ ಕರಕೊಂಡು ಚಂಬಸ್ಯ ಕೈ ಹಿಡಕೊಂಡು ಬೆರಳಿಗೆ ಬೆರಳು ಸವರಿ ಮೆಲ್ಲಕ ಕೇಳಿದ. "ಏನಾ ಬಸ್ನಿ, ನಾಕ್ ತಿಂಗಳಾತಿ ಬಾಯಿ ಪತ್ತೇವು ಮಾಡ್‌ತದೀನಿ. ಇದನ್ನ ಯಂಗನ್ನ ತಡಕಮ್‌ತಿನೋಳು. ನಿನ್ನ ನೋಡಿ ಹಾಸಿಗೆ ಪತ್ತೇವು ಯಂಗ ಮಾಡ್ಲಿ. ಏ ತಡಕಂಬಾಕಾಗ್‌ವಲ್ದಪೋ ಬಾ ಸೊಲುಪು ಗಲ್ಲನ್ನ ಕಡಿತೀನಿ. ಬೆಲ್ಲದ ಕಣ್ಣೆಗಿನ್ನ ರುಸಿ ಐತೆ ನಿನ್‌ಗಲ್ಲ. ಮೈ ಮರಗಟ್ಟೈತೆ. ಮದಿವ್ಯಾಗಿ ಮೂರೇ ವರ್ಸದಾಗ ಇದೇನ್ ರ್‍ವಾಗ ಕಲೆಬಿತ್ತು ನನಿಗೆ. ಕೊಬ್ಬರಿಸೀಣಿ ಆಗಿದ್ದಿ ಪುಳ್ಳೆ, ಎನ್ನುತ್ತಲೇ ಬಸಮ್ಮನನ್ನ ಬಿಗಿದಪ್ಪಿಕೊಂಡ. "ಬರಗೆಟ್ಟೋನಿಗೆ ಬಚ್ಚಲ ಸೊಂದಾದರೇನು ಬುಡಕಲ್ಲ ಅಮ್ಮಂಗ ಆಯಿತು ನಿನ್ ಕತೆ. ಇದೇನ್ ನಿಂದು ಮಕ್ಕಳು ಐದಾವಂಬ ಅರುವುಗುಡ ಇಲ್ಲ" ಅಂತ ಬಸಮ್ಮ ಕೊಸರಿಕೊಂಡು ಬಿಡಿಸಿಕೊಂಡಳು. ಚಂಬಸಪ್ಪ ಶಾಂತವಾಗಿದ್ದಾತ ಉಸುರು ಮ್ಯಾಲೆ ಕೆಳಗಾದಂಗಾಗಿ ಒಂದೇ ಸಮನೆ ಕೆಮ್ಮಿದ. ಮೈ ನಡುಗು ಬಂದು, ಚಳಿ ಹೆಚ್ಚಾಯಿತು. ಬಸಮ್ಮನ ಕೈ ಗಟ್ಟಿಗಿಡದ. ಪೆಟಾರಿ ಪೆಟಾರಿ ಎನ್ನುತ್ತಲೇ ಅದರ ಬೀಗದ ಕೈ ಕೊಟ್ಟ. ಬಸಮ್ಮ ಅಳುತ್ತಾ ನಿಂತಳು. ಮಕ್ಕಳು ಓಡಿ ಬಂದುವು. ಯಪ್ಪಾ ಎದ್ದೇಳಪೋ ಯಪ್ಪಾ ಅಂದವು. ಸಕ್ರೆಗೊಂಬೆಯಂತಿದ್ದ ಬಸಮ್ಮ, ಕಲ್ಲುಗೊಂಬೆಯಂತೆ ನಿಂತಳು. ಚಂಬಸಪ್ಪನ ಉಸುರು ನಿಂತಿತು. ಜನ ಮಣ್ಣ ಮಾಡಲು ಬಂದರು. ಋಣ ತೀರಿತೆಂದು ಬಸಮ್ಮ ಕುಣಿ ಮುಚ್ಚಿದಮೇಲೆ ಮನೆಗೆ ಬಂದು ಆಭರಣಗಳನ್ನೆಲ್ಲ ತೆಗೆದು ಬಟ್ಟೆಯೊಳಗೆ ಸುತ್ತಿ, ಗಂಡ ಕೊಟ್ಟ ಬೀಗದ ಕೈಯಿಂದ ಪೆಟಾರಿ ತೆಗೆದಳು. ಐನೂರ ನೋಟಿನ ಕಂತೆಗಳು, ರೇಷ್ಮೆ ಸೀರೆಗಳು, ಬಂಗಾರದ ಗಟ್ಟಿಗಳು ಇರೋದು ಕಂಡು ಕಣ್ಣಾಲಿಗುಂಟಾ ನೀರು ಹರಿದವು. ಸುತ್ತಿದ್ದ ಬಟ್ಟೆಯಗಂಟು ಅದರೊಳಗಿಟ್ಟಳು. ಮಕ್ಕಳು ಈ ಕಡೆ ಬರೋದು ನೋಡಿ ರಪ್ ಅಂತ ಪೆಟ್ಟಿಗೆ ಮುಚ್ಚಿ ಬೀಗ ಹಾಕಿದಳು.

ಗಂಡ ಚಂಬಸಪ್ಪ ಹೋಗಿ ಹದಿನೈದು ವರುಷಗಳಲ್ಲಿ ಅವ್ವ ಪೆಟಾರಿಯನ್ನು ಪೀರಲು ದೇವರ ಪೆಟ್ಟಿಗೆಗಿಂತ ಚೆನ್ನಾಗಿ ಪೂಜೆ ಮಾಡಿ ಕಾಪಾಡುತ್ತಿದ್ದಳು. ಮಕ್ಕಳು ಶಿವರುದ್ರ, ಬಸಲಿಂಗ ದೊಡ್ಡವರಾದರು. ನಿಂಗದಳ್ಳಿಯ ಹತ್ತಿರದ ಸಂಬಂಧಿಕ ಮನೆಯ ಇಬ್ಬರೂ ಅಕ್ಕ ತಂಗಿಯರನ್ನ ತಂದು ಮದುವೆ ಮಾಡಿಸಿದಳು ಅವ್ವ. "ಇಬ್ರು ಸೊಸ್ತಿರು ಏಟು ಚೆಂದ ನೋಡಿಕೆಂತಾರಮ್ಮ ಬಸಮ್ಮವ್ವನ್ನ ಮನೆ ಸೊಸ್ತಿರು ಅಂದ್ರೆ ಇಂಗಿರಬೋಕು ಬುಡು. ಸೊಂತ ತಾಯಿನ್ನ ಸಾಕಿದಂಗ ಸಾಕತಾರ" ಅಂತಿದ್ರು ಜನ. ಅವ್ವ ಪೆಟಾರಿಯನ್ನು ಬಿಟ್ಟು ಎಲ್ಲೂ ಹೋಗುತಿರಲಿಲ್ಲ. ಸಣ್ಣ ಸೊಸೆ ಲಚ್ಚಿಮಿ ಗಂಡ ಬಸಲಿಂಗನಿಗೆ ಕಿವಿಯೂದಿದಳು. ಕುತೂಹಲ ತಡೆಯಲಾರದೆ ಮಕ್ಳುಸೊಸ್ತಿರು ಪೆಟ್ಟಿಗೆಯನ್ನು ತೆರೆಯಲೇಬೇಕೆಂದು ಒತ್ತಾಯ ಮಾಡಿದರು. ಅವ್ವ ತೆರೆದದ್ದಷ್ಟೇ ಅಲ್ಲ ಬಂಗಾರ, ರೇಷ್ಮೆಗಳನ್ನು ಸವ್ ಪಾಲು ಮಾಡಿ ಮಕ್ಕಳಿಗೆ ಹಂಚಿದಳು. ಅವ್ವನನ್ನು ಮತ್ತಿಷ್ಟು ಚೆನ್ನಾಗಿ ಸಾಕಿ ಸಲಹಲಾರಂಭಿಸಿದರು. ಬಸಮ್ಮವ್ವ ಕಟ್ಟಿಗೆಯ ಹಲಗೆಯ ಕೆಳಗೆ ಇಟ್ಟಿದ್ದ ಐದುನೂರುಸಾವಿರ ನೋಟುಗಳ ಕಂತೆ ಕಂತೆಗಳು